


ಅವಳಿಗಿದು ಅಭ್ಯಾಸವಾಗಿಬಿಟ್ಟಿತ್ತು. ಮೊದಲಿಗಿದನ್ನು ಅನಿವಾರ್ಯವೆಂದು ಪರಿಗಣಿಸಿದಳು, ಆಮೇಲೆ ಸಹಜವೆಂದು ಒಪ್ಪಿದ್ದಳು.

ಸೌಮ್ಯ ಕೊನ್ಸಸಾಂವ್! ಗಂಡನ ನಿರ್ಲಕ್ಷ್ಯವನ್ನು ಸಹನೆಯಿಂದ ಸಹಿಸುತ್ತಿದ್ದ ಅವಳನ್ನು ದೇವತಾ ಸ್ವರೂಪವೆಂದು ಜನ ಸಕಾರಣವಾಗಿಯೇ ಕರೆಯುತ್ತಿದ್ದರು. ನಿಜಕ್ಕೂ ಆಕೆ ವಿಪರೀತ ಕಣ್ಣೀರು ಸುರಿಸದ, ಹೆಚ್ಚಿನ ಖುಷಿಯನ್ನು ತೋರದ ಸಮಚಿತ್ತದಿಂದಿರುತ್ತಿದ್ದಳು. ಆಕೆಯ ಎಲ್ಲ ವಿಚಾರಗಳೂ ಸಪಾಟಾಗಿ, ಏರುಪೇರಿಲ್ಲದೇ ಇರುತ್ತಿದ್ದುವು. ಸುಂದರಳೂ ಅಲ್ಲದ ಕುರೂಪಿಯೂ ಅಲ್ಲದ ಸಾಧಾರಣ ಮುಖಚಹರೆ ಹೊತ್ತ ಆಕೆಯನ್ನು ಎಲ್ಲರೂ ದಯಾಳುವೆಂದು ಕರೆಯುತ್ತಿದ್ದರು. ಆಕೆ ಯಾರ ವಿಷಯದಲ್ಲೂ ಕೆಟ್ಟದ್ದನ್ನು ಆಡಿದವಳಲ್ಲ. ಎಲ್ಲರನ್ನು, ಎಲ್ಲವನ್ನೂ ಕ್ಷಮಿಸಿಬಿಡುತ್ತಿದ್ದಳು. ದ್ವೇಷಿಸುವುದು ಹೇಗೆಂದು ಆಕೆಗೆ ಗೊತ್ತಿರಲಿಲ್ಲ. ಬಹುಶಃ ಹೇಗೆ ಪ್ರೀತಿ ಬೇಕೆನ್ನುವುದೂ ಗೊತ್ತಿರಲಿಲ್ಲವೇನೋ.

ಕ್ರಿಸ್‌ಮಸ್‌ನ ಪೂರ್ವ ಸಂಜೆ (ಅದು 1861 ಅಥವಾ 1862 ಆಗಿರಬಹುದು), ಮನೇಸಿಸ್ ರಂಗಮಂದಿರಕ್ಕೆ ಹೋಗಿದ್ದ. ನನ್ನ ಊರು ಮಂಗರಚೀಬಾಕ್ಕೆ ನಾನು ಹೋಗಬೇಕಿತ್ತಾದರೂ, ದೊಡ್ಡನಗರದ ಮಧ್ಯರಾತ್ರೆಯ ಪ್ರಾರ್ಥನೆ ಹೇಗಾಗುತ್ತದೆನ್ನುವ ಕುತೂಹಲದಿಂದ ಕ್ರಿಸ್‌ಮಸ್ ಮುಗಿಯುವವರೆಗೂ ಇಲ್ಲೇ ಉಳಿವುದೆಂದು ನಿರ್ಧರಿಸಿದೆ. ಆವತ್ತೂ ಎಂದಿನಂತೆ ಎಲ್ಲರೂ ಮಲಗುವ ಕೋಣೆಗೆ ಹೋಗಿದ್ದರು. ನಾನು ಮನೆಯ ಮುಂದಿನ ವೆರಾಂಡಾದಲ್ಲಿ ತಯಾರಾಗಿ ಕೂತಿದ್ದೆ. ಯಾರನ್ನೂ ಎಬ್ಬಿಸದೇ ಅಲ್ಲಿಂದ ನೇರವಾಗಿ ಹೊರಬೀಳಬಹುದಿತ್ತು. ಮನೆಗೆ ಮೂರು ಕೀಲಿ ಕೈಗಳಿದ್ದುವು: ಒಂದನ್ನು ನೋಟರಿ ಒಯ್ಯುತ್ತಿದ್ದ, ನನ್ನ ಹತ್ತಿರ ಒಂದಿತ್ತು, ಮೂರನೆಯದು ಮನೆಯಲ್ಲಿರುತ್ತಿತ್ತು.